ತೀರ್ಪು ಆಗಿದೆ. 10ವರ್ಷದ ಕೆಳಗಿರುವ ಮಕ್ಕಳನ್ನು ದುಡಿಮೆಗೆ ಉಪಯೋಗಿಸಬಾರದು ಎಂದು, ಸಣ್ಣ ಮಕ್ಕಳು, ಓದಬೇಕು ಎಂದು ನಾವೂ ಕೂಡ ಒಂದು ವರದಿ ಕೊಟ್ಟಿದ್ದೇವೆ. ಆ ತೀರ್ಪಿನ ವಿರುದ್ಧ ಸರ್ಕಾರ ಸುಪ್ರೀಂ ಕೋರ್ಟಿಗೆ ಹೋಗುತ್ತದೆ ಎಂದು ಕೇಳಿ ಬಹಳ ದುಃಖವಾಯಿತು. ಈಗ ತಮ್ಮ ಅನಿಸಿಕೆ ಏನು ಎಂಬುದನ್ನು ಹೇಳಬೇಕು. ಇಡೀ ಕರ್ನಾಟಕದಲ್ಲಿ ಎಲ್ಲಾ ಮಕ್ಕಳ ಸಂಸ್ಥೆಗಳೇನಿವೆ ಒಂದು ಆಂದೋಲನ ಮಾಡಬೇಕೆಂದು ಇವೆ ಇದನ್ನು ತಪ್ಪಿಸಬೇಕು, ಸುಪ್ರೀಂಕೋರ್ಟಿಗೆ ಹೋಗುವ ಕೆಲಸವನ್ನು ಖಂಡಿತ ಮಾಡಬಾರುದು ಸರ್ಕಾರ, ಬೇರೆ ಯಾರು ಬೇಕಾದರೂ ಹೋಗಿಕೊಳ್ಳಿಲಿ. ಮಕ್ಕಳನ್ನು ದುಡಿಮೆಗೆ ಉಪಯೋಗಿಸಿಕೊಳ್ಳುವುದು ತಪ್ಪು ಎಂಬುದು ತಮಗೂ ಕೂಡ ಗೊತ್ತಿದೆ. ಇದು ಇವತ್ತು ಪೇಪರ್‌ನಲ್ಲಿ ಕೂಡ ಪ್ರಸ್ತಾವವಾಗಿದೆ. ಅದರ ಬಗ್ಗೆ ಸುಪ್ರೀಂಕೋರ್ಟಿಗೆ ಅಪೀಲ್ ಹೋಗುತ್ತೀರೋ ಇಲ್ಲವೋ ಎಂಬ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಬೇಕು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ, ಇದರ ಬಗ್ಗೆ ನನಗೆ ಮಾಹಿತಿ ಇಲ್ಲ, ಪತ್ರಿಕೆಯಲ್ಲಿ ಬಂದಿರುವ ವಿಚಾರ ಎತ್ತಿದ್ದೀರಿ, ಚೈಲ್ಡ್ ಲೇಬರ್ ಕೂಡದು ಎಂಬುದು ಇದೆ. ಈಗೇನಾಗಿದೆ ಅಂದರೆ ಹೆಜಾರ್ಡಸ್‌ಲೇಬರ್‌ನಲ್ಲಿ ಮಕ್ಕಳನ್ನು ತೊಡಗಿಸಬಾರದು ಎಂದು ಒಂದು ಭಾಗ, ಬಾಕಿ ಕೆಲವು ಸಂದರ್ಭಗಳಲ್ಲಿ ಹೊಟ್ಟೆಹೊರೆಯಲಿಕ್ಕೆ 10-14ವರ್ಷದ ಮಕ್ಕಳು ಅಲ್ಲಿ ಇಲ್ಲಿ ಕೆಲಸ ಮಾಡುತ್ತಿರುವುದು ಇದೆ, ಆದರೂ ಅದು ಕಾನೂನಿನ ಕೆಳಗೆ ಅಪರಾಧವೇ. ತಾವು ಪೂರ್ತಿ ಮಾಹಿತಿ ಇದ್ದರೆ ಕೊಡಿ. ನನ್ನ ಇಲಾಖೆಯಿಂದ ಖಂಡಿತ ನಾನು ಅದನ್ನು ನೋಡುತ್ತೇನೆ.

ರಾಜ್ಯದಲ್ಲಿ ಲಕ್ಷಾಂತರ ದಿನಗೂಲಿ ನೌಕರರ ಸಮಸ್ಯೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಅಧ್ಯಕ್ಷರೇ, ಇದು ರಾಜ್ಯದ ಲಕ್ಷಾಂತರ ದಿನಗೂಲಿ ನೌಕರರ ಸಮಸ್ಯೆ ದಿನಗೂಲಿ ನೌಕರರು ಯಾವ್ಯಾವಾಗ ಚಳುವಳಿ ಮಾಡುತ್ತಿದ್ದರೋ ಆಗ ಸರ್ಕಾರ ಒಂದು ಆಶ್ವಾಸನೆ ನೀಡುತ್ತಿತ್ತು. ಆದರೆ 1997ರ ಏಪ್ರಿಲ್‌ನಲ್ಲಿ ಖಾಯಂಗೊಂಡ ದಿನಗೂಲಿ ನೌಕರರ ಪಿಂಚಣಿ ಬಗ್ಗೆ ಮತ್ತು ಇತರ ದಿನಗೂಲಿಯವರ ಸಮಸ್ಯೆಗಳ ಬಗ್ಗೆ ಮೂರು ತಿಂಗಳೊಳಗಾಗಿ ಬಗೆಹರಿಸುವುದಾಗಿ ಲಿಖಿತವಾಗಿ ಸರ್ಕಾರ ಒಪ್ಪಂದ ಮಾಡಿಕೊಂಡಿದೆ ಆದರೆ ಆ ಒಪ್ಪಂದಕ್ಕೆ ಇವತ್ತಿನವರೆಗೆ ಏನೂ ಮಾನ್ಯತೆ ಕೊಟ್ಟಿಲ್ಲ. ಅದಕ್ಕೆ ಮುಂಚೆ ಒಂದು ಉನ್ನತಮಟ್ಟದ ಸಮಿತಿ ಕೂಡ ಆಯಿತು, ಆ ಸಮಿತಿ ಮಲಗಿದೆಯೋ ಎದ್ದಿದೆಯೋ ಒಂದೂ ಅರ್ಥವಾಗುತ್ತಿಲ್ಲ. ಹಾಗಾಗಿ ಮತ್ತೆ ಲಕ್ಷಾಂತರ ದಿನಗೂಲಿ ನೌಕರರು ಮೇ 4ನೇ ತಾರೀಖು ಇಲ್ಲಿಗೆ ಬಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ ಎಂಬ ಹೇಳಿಕೆಗಳನ್ನು ಸಂಬಂಧಿಸಿದ ಸಂಘಗಳು ಕೊಡುತ್ತಿವೆ. ಈ ರೀತಿ ಮುತ್ತಿಗೆ ಹಾಕುವಂಥ ಕಾರ್ಯಕ್ರಮಗಳು ನಡೆಯುವುದು ವಿಶೇಷವಲ್ಲ. ಆದರೆ ಸರ್ಕಾರ ಏನು ಲಿಖಿತ ಒಪ್ಪಂದ ಮಾಡಿಕೊಂಡಿರುತ್ತದೆ ಅದನ್ನಾದರೂ ತಾವು ಜಾರಿಗೆ ತರಲಿಲ್ಲ ಅಂದರೆ ಇದರಿಂದ ಮನಸಿಗೆ ತುಂಬಾ ನೋವಾಗುತ್ತದೆ. ಆದ್ದರಿಂದ 97 ಏಪ್ರಿಲ್‌ನಲ್ಲಿ ಒಪ್ಪಂದವಾಗಿರುವ ಅಂಶವನ್ನು ಆದರೂ ತಾವು ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಅಧ್ಯಕ್ಷರೇ, ಸರ್ವೋಚ್ಚ ನ್ಯಾಯಾಲಯದಲ್ಲಿ ಇದಕ್ಕೆ ಸಂಬಂಧಿಸಿದಂತೆ ಒಂದು ತೀರ್ಪು ಕೊಟ್ಟಿದ್ದಾರೆ. ಅದು ಪರ್ಟಿಕ್ಯುಲರ್ಲಿ ಪಿಡಬ್ಲ್ಯೂಡಿಯಲ್ಲಿದ್ದ ಗ್ಯಾಂಗ್ ವರ್ಕರ್ಸ್‌ನೆಲ್ಲಾ ಒಂದು ಕಟ್ ಆಫ್ ಡೇಟ್‌ಗೆ ಅಬ್‌ಸಾರ್ಬ್ ಮಾಡಬೇಕು ಎಂದು ಆ ಡೇಟಿಗೆ ಅವರನ್ನೆಲ್ಲಾ ಅಬ್‌ಸಾರ್ಬ್ ಮಾಡಿ ಆಯಿತು. ಅದು ಗ್ಯಾಂಗ್‌ವರ್ಕರ್ಸ್‌ಗೆ ಸಂಬಂಧಿಸಿದ್ದು. ಇನ್ನು ಅಲ್ಲಿ ಇಲ್ಲಿ ಮಾಡುತ್ತಿರುವ ದಿನಗೂಲಿ ನೌಕರರು, ಸೀಸನಲ್ ಎಂಪ್ಲಾಯ್ಮೆಂಟ್ ಮಾಡಿರುವಂಥ ದಿನಗೂಲಿ ನೌಕರರನ್ನೂ ಪರ್ಮನೆಂಟ್ ಎಸ್ಟಾಬ್ಲಿಷ್‌ಮೆಂಟ್ ಮಾಡಬೇಕೆಂದರೆ ಈಶ್ವರಪ್ಪನವರೇ, ನಿಮಗೆ ಗೊತ್ತಿದೆ, ಇವತ್ತು ಕರ್ನಾಟಕದಲ್ಲಿ ನಮ್ಮ ಆದಾಯದ ಶೇಕಡ 68ರಷ್ಟು ಎಸ್ಟಾಬ್ಲಿಷ್‌ಮೆಂಟಿಗೇ ಹೋಗುತ್ತಿದೆ, ದಿನಗೂಲಿ ನೌಕರರನ್ನೆಲ್ಲಾ ಖಾಯಂ ಮಾಡಬೇಕೆಂಬ ತೀರ್ಮಾನಕ್ಕೆ ನಾವು ಬಂದುಬಿಟ್ಟರೆ ನಾನು ಹೇಳುತ್ತಿದ್ದೇನೆ, ಅಭಿವೃದ್ಧಿ ಕಾರ್ಯಗಳಿಗೆ ನಿಮಗೆ ಒಂದು ಪೈಸೆ ಸಿಗುವುದಿಲ್ಲ. ಆದರೂ ಸರ್ವೋಚ್ಚ ನ್ಯಾಯಾಲಯ ಏನು ತೀರ್ಪು ಕೊಟ್ಟು ನಮ್ಮ ಸರ್ಕಾರಕ್ಕೆ ಏನು ನಿರ್ದೇಶನ ಕೊಟ್ಟಿದೆ ಅದಕ್ಕನುಗುಣವಾಗಿ ನಾವು ಕಾರ್ಯಕ್ರಮ ಕೈಗೊಂಡಿದ್ದೇವೆ ಬಾಕಿ ಇರುವ ವಿಚಾರಗಳ ಬಗ್ಗೆ, ಈಗಾಗಲೇ ದಿನಗೂಲಿ ನೌಕರರನ್ನು ಮಾಡಬೇಬಾರದೆಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ತೀರ್ಪಿನ ಹಿನ್ನೆಲೆಯಲ್ಲಿ ಇನ್ನೂ ಏನಾದರೂ ಕ್ರಮ ಬಾಕಿ ಇದ್ದರೆ ಹಂತಹಂತವಾಗಿ ಅದನ್ನು ಕೈಗೊಳ್ಳುವ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಹೇಳುತ್ತಿರುವುದು, 97ರ ಏಪ್ರಿಲ್‌ನಲ್ಲಿ ಅವರು ಲಕ್ಷಾಂತರ ಮಂದಿ ಬಂದರು, ಅವರನ್ನು ಸಮಾಧಾನ ಮಾಡುವುದಕ್ಕಾಗಿ ಒಂದು ಲಿಖಿತ ಒಪ್ಪಂದ ಮಾಡಿಕೊಂಡು ಬಿಡುತ್ತೀರಿ, ಮತ್ತೆ ಎರಡು ವರ್ಷವಾದ ಮೇಲೆ ಇಂತಹ ಹೋರಾಟಗಳು ನಡೆಯುತ್ತಿರುತ್ತವೆ. ಕಾನೂನುಬಾಹಿರವಾಗಿ ಖಂಡಿತ ಒಂದೂ ಮಾಡಬೇಡಿ,ಇದೆಲ್ಲಾ ಇತ್ತೀಚೆಗೆ ನಡೆಯುತ್ತಿಲ್ಲ, ನನಗೂ ಗೊತ್ತಿದೆ. 1984ಕ್ಕಿಂತ ಮುಂಚೆ ಯಾರು ದಿನಗೂಲಿ ನೌಕರರಾಗಿದ್ದರೋ ಅವರನ್ನು ಖಾಯಂ ಮಾಡಬೇಕಾದ ಕರ್ತವ್ಯ ಸರ್ಕಾರದ್ದಿದೆ. ಹೀಗಾಗಿ ಸುಪ್ರೀಂ ಕೋರ್ಟ್ ಹೇಳಿರುವುದಕ್ಕೂ ನೀವು ಏನು ಒಪ್ಪಂದ ಮಾಡಿಕೊಂಡಿದ್ದೀರಿ ಅದರಂತೆ ಅದನ್ನೂ ಜಾರಿಗೆ ತರುತ್ತೀರಾ? ಜಾರಿಗೆ ತಂದರೆ ಹೋರಾಟದ ಪ್ರಶ್ನೆ ಬರುವುದಿಲ್ಲ. ಸಂಬಂಧಪಟ್ಟ ವ್ಯಕ್ತಿಗಳನ್ನು ಕರೆಸಿ ಮಾತುಕತೆ ನಡೆಸಿ. ಎರಡು ಲಕ್ಷ ಜನ ಇಲ್ಲಿಗೆ ಬರುತ್ತಾರೆ ಅಂದರೆ ಅರ್ಥವೇನು? ಸುಮ್ಮನೆ ಲಕ್ಷಾಂತರ ರೂ ಅವರಿಗೂ ದಂಡ. ನೀವು ಒಪ್ಪಿಗೆ ಕೊಟ್ಟಿರುವ ಪ್ರಕಾರವಾದರೂ ನಡೆದುಕೊಳ್ಳಲು ಸಿದ್ದರಿದ್ದೀರಾ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕಾನೂನು ವಿರುದ್ಧವಾಗಿ ನಿಮಗೆ ಖಂಡಿತ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

5.10 ಪಿಎಂ

ಶ್ರೀ ಎಂ.ಸಿ. ನಾಣಯ್ಯ : ಎರಡು ಲಕ್ಷ ಜನರನ್ನು ನೀವು ಖಾಯಂ ಮಾಡಿ ಎಂದು ಹೇಳಿದರೆ ಈಗಾಗಲೇ ಐದೂವರೆ ಲಕ್ಷ ಜನರು ಇದ್ದಾರೆ. ಇನ್ನು ಇದಕ್ಕೆ ಎರಡೂವರೆ ಲಕ್ಷ ಸೇರಿದರೆ ಅದು ಎಂಟು ಲಕ್ಷ ಆಯಿತು. ಎಂಟು ಲಕ್ಷಕ್ಕೆ ನೂರು ಪರ್‌ಸೆಂಟ್ ಅಲ್ಲಿಗೆ ಹೋಗುತ್ತದೆ. ಒಂದು ಹೇಳುತ್ತೇನೆ, ಸುಪ್ರೀಂ

ಕೋರ್ಟಿನವರು ಕೊಟ್ಟಿರುವ ನಿರ್ದೇಶನ ಒಂದು ಇದೆ, ಅದಕ್ಕೊಂದು ಕಟ್ ಆಫ್ ಡೇಟನ್ನು ಕೊಟ್ಟಿದ್ದಾರೆ. ಆ ಕಟ್ ಆಫ್ ಡೇಟಿಗೆ ಸಂಬಂಧಪಟ್ಟ ಹಾಗೆ ನಾವು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಪಿಡಬ್ಲೂಡಿಯಲ್ಲಿರುವ ಗ್ಯಾಂಗ್ ವರ್ಕರ್ಸ್ ಯಾರು ಉಂಟು, ಅದಕ್ಕೆ ಸಂಬಂಧಪಟ್ಟ ಹಾಗೆ ಬಹುತೇಕ ಆ ಕೆಲಸವನ್ನು ಮಾಡಿ ಅಬ್‌ಸಾರ್ಬ್ ಆಗಿದೆ. ಬಾಕಿ ಇರುವ ಕೆಲವು ಸಂದರ್ಭದಲ್ಲಿ ತಾವು ಹೇಳುತ್ತಿರುವುದು ಅಗ್ರಿಮೆಂಟ್ ಆಗಿದೆ ಎಂದು. ಕಾನೂನು ಅಡಿಯಲ್ಲಿ ಅದೇನುಂಟು ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : 1996ರ ಜೂನ್‌ನಲ್ಲಿ ಮಾಡಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದು ಉನ್ನತ ಮಟ್ಟದ ಸಮಿತಿ ನೇಮಕವಾಯಿತು. ಏಕೆಂದರೆ ಈ ರೀತಿ ಸಮಸ್ಯೆಗಳು ಪರಿಹಾರವಾಗಬೇಕಾದರೆ ಏನು ಸಮಿತಿಗಳು ವರದಿಯನ್ನು ಕೊಟ್ಟರೆ ಆ ಸಮಿತಿಯನ್ನು ಸರ್ಕಾರ ಗಮನಿಸಿ ಅದರ ಬಗ್ಗೆ ಕ್ರಮ ತೆಗೆದುಕೊಂಡರೆ ಆಗುತ್ತದೆ. ಏಕೆಂದರೆ ಆ ಸಮಿತಿ ಏನು ಕೆಲಸ ಮಾಡುತ್ತಿಲ್ಲ. ಹಾಗಾಗಿ ಆ ಸಮಿತಿಯನ್ನು ಡಿಸಾಲ್ವ್ ಮಾಡಿ. ಅದಕ್ಕೆ ನಾನು ಹೇಳುತ್ತಿರುವುದು, ಸುಮ್ಮನೆ ಜನರು ಬಂದಾಗ ಏನೋ ಒಂದು ಹೇಳಿಕೆ ಕೊಟ್ಟು ಮಾಡುವುದು ಮತ್ತು ಲಿಖಿತವಾಗಿ ಅಗ್ರಿಮೆಂಟ್ ಮಾಡಿಕೊಳ್ಳುವುದನ್ನು ನಿಲ್ಲಿಸಿ. ನಿಮ್ಮ ಕೈಯಲ್ಲಿ ಆಗುತ್ತಾ ಮಾಡಿ, ಇಲ್ಲದಿದ್ದರೆ ಮಾಡುವುದಿಲ್ಲ ಎಂದು ಹೇಳಿ. ಸುಮ್ಮನೆ ಬಂದಾಗಲೆಲ್ಲಾ ಒತ್ತಾಯ ಮಾಡಿದಾಗ ಹೇಳಿಕೊಂಡು ನಮಗೂ ಏನೋ ಸಿಗುತ್ತವೆ, ನಮಗೂ ಏನೊ ಖಾಯಂ ಮಾಡುತ್ತಾರೆ ಎಂದು ಅವರುಗಳು ಆಸೆ ಇಟ್ಟುಕೊಂಡು ಕುಳಿತಿದ್ದಾರೆ. ಇದರ ದುರುಪಯೋಗವನ್ನು ಕೆಲವು ವ್ಯಕ್ತಿಗಳು ಮಾಡಿಕೊಳ್ಳುತ್ತಾರೆ. ಸರ್ಕಾರಕ್ಕೆ ನಾನು ಹೇಳುವುದಿಷ್ಟೆ. ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಶಕ್ತಿ ಇದೆಯಾ ಸುಪ್ರೀಂ ಕೋರ್ಟ್ ಪ್ರಕಾರ ಇರಬಹುದು, ಅಥವಾ ನೀವು ಈ ಹಿಂದೆ ಲಿಖಿತ ಮುಖಾಂತರ ಹೇಳಿದ ಪ್ರಕಾರ ಇರಬಹುದು. ಈಗಿನ ಪ್ರಕಾರ ಸುಪ್ರೀಂ ಕೋರ್ಟು ಏನು ಜಡ್ಜ್‌ಮೆಂಟನ್ನು ಕೊಟ್ಟಿದೆ ಅದರ ಪ್ರಕಾರ ನಡೆದುಕೊಳ್ಳಿ. ಮತ್ತೇನು ನೀವು ಲಿಖಿತ ಮುಖಾಂತರ ಸಂಬಂಧಪಟ್ಟ ಸಂಘ ಸಂಸ್ಥೆಗಳ ಜೊತೆಗೆ ಮಾತುಕತೆ ನಡೆಸಿದ್ದೀರಿ, ಅದರ ಮೇಲೆ ಅಗ್ರಿಮೆಂಟ್ ಆಗಿದೆ, ಅದರ ಪ್ರಕಾರ ನೀವು ನಡೆದುಕೊಳ್ಳುತ್ತೀರಾ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಇಷ್ಟು ಭರವಸೆ ಕೊಟ್ಟಿದ್ದೇನೆ. ಸುಪ್ರೀಂ ಕೋರ್ಟಿನ ನಿರ್ದೇಶನದ ಪ್ರಕಾರ ನಾವು ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಬಹುತೇಕ ಆ ಕಾರ್ಯಕ್ರಮಗಳನ್ನು ಕೈಗೊಂಡಾಗಿದೆ. ಬಾಕಿ ಇರುವ ಸಂಬಂಧಪಟ್ಟ ಹಾಗೆ ಒಂದು ಉನ್ನತ ಮಟ್ಟದ ಸಮಿತಿಯನ್ನು ನಾವು ರಚನೆ ಮಾಡಿದ್ದೇವೆ. ಅದರ ಬಗ್ಗೆ ತಾವು ಹೇಳಿದ್ದೀರಿ. ನೀವು ಹೇಳುತ್ತಿರುವುದು ಬಹಳ ಸತ್ಯ. ಕೆಲವು ಸಂದರ್ಭದಲ್ಲಿ ಆಗದೇ ಇರುವ ವಿಚಾರವನ್ನು ನಾವು ಉನ್ನತ ಮಟ್ಟದ ಸಮಿತಿಯಿಂದ ಮಾಡುತ್ತಿರುವುದು, ಕಡೆಗೆ ಆಗುವುದಿಲ್ಲ ಎಂದು ಹೇಳುವುದು. ಇದರ ಬಗ್ಗೆ ನಿರ್ದಿಷ್ಟವಾಗಿರುವ ಒಂದು ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ.